ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ ರಾಣೇಬೆನ್ನೂರು.
ಸಿ.ಸಿ.ಸಂಖ್ಯೆಃ 1177/2025

ಪಿ ಡಬ್ಲ್ಯೂಃ 2

ಸಿ ಡಬ್ಲ್ಯೂಃ 3

| | | |
|---|---|---|
| ಸಾಕ್ಷಿಯ ಹೆಸರು | : | ರಮೇಶ ಪೂಜಾರ |
| ತಂದೆಯ ಹೆಸರು | : | ಬಸಪ್ಪ |
| ವಯಸ್ಸು | : | 45 |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಐರಣಿ |

ದಿನಾಂಕಃ12.05.2026. ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ**

ಸಾಕ್ಷಿಗೆ ನಿಪಿ 1 ರ ಜಪ್ತಿ ಪಂಚನಾಮೆಯನ್ನು ತೋರಿಸಲಾಗಿ ಅದರಲ್ಲಿನ ತಮ್ಮ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸಾಕ್ಷಿಯ ಸಹಿಯನ್ನು **ನಿಪಿ 1 ಬಿ** ಎಂದು ಗುರುತಿಸಲಾಯಿತು. ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಸದರಿ ಸಹಿಯನ್ನು ನಾನು ಈಗ್ಗೆ 2 ವರ್ಷಗಳ ಹಿಂದೆ ಅಬಕಾರಿ ಕಚೇರಿಯಲ್ಲಿ ಮಾಡಿರುತ್ತೇನೆ. ನಿಪಿ 1 ರಲ್ಲಿ ಬರೆದಿರುವ ವಿಚಾರಗಳ ಬಗ್ಗೆ ನನಗೆ ಗೊತ್ತಿಲ್ಲ. ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ.

**ಮಾನ್ಯ ಸಸಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು**

**ಪಾಟೀ ಸವಾಲುಃ ಮಾನ್ಯ ಸ.ಸ.ಅ. ರವರಿಂದಃ**

ದಿನಾಂಕ 22.05.2025 ರಂದು ಸಂಜೆ 5.20 ರಿಂದ 6.45 ರ ವರೆಗೆ ನನ್ನ ಹಾಗೂ ಚಾ ಸಾ 2 ರವರ ಸಮಕ್ಷಮ ಗುನ್ನಾ ಜಾಗದಲ್ಲಿ ನಿಪಿ 1 ರಂತೆ ಆರೋಪಿಯಿಂದ ಮುದ್ದೆ ಮಾಲುಗಳನ್ನು ವಶಪಡಿಸಿಕೊಂಡು ನಮ್ಮ ಸಹಿಗಳನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಸಮಕ್ಷಮ ರಾಸಾಯನಿಕ ಪರೀಕ್ಷೆಗಾಗಿ ಸದರಿ ಮುದ್ದೆ ಮಾಲುಗಳನ್ನು ಪ್ರತ್ಯೇಕಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿಯು ನಮ್ಮ ಊರಿನವರಾದ ಕಾರಣ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಆರೋಪಿ ಪರ ಪಾಟೀ ಸವಾಲು ಇಲ್ಲ.**

ಮರು ವಿಚಾರಣೆ ಇಲ್ಲ.

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

ಓ ಹೇ ಕೆ ಸರಿ ಇದೆ. ಪ್ರಧಾನ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.